ಕಳ್ಳತನ ಮತ್ತು ದರೋಡೆ ಪ್ರಕರಣಗಳು

1306(1568); ಶ್ರೀ. ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಲಿಂಗಸುಗೂರು ತಾಲ್ಲೂಕಿನಲ್ಲಿ ಕಳ್ಳತನ, ದರೋಡೆ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಲಿಂಗಸುಗೂರು ತಾಲ್ಲೂಕಿನಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ. ವಶಪಡಿಸಿಕೊಂಡ ಮಾಲುಗಳು ಮತ್ತು ಹಣದ ಮೊತ್ತವೆಷ್ಟು ;

ಇ) ಈ ರೀತಿ ದಾಖಲಾಗಿರುವ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಹಾಗೂ ಬಾಕಿ ಉಳಿದ ಪ್ರಕರಣಗಳೆಷ್ಟು; ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಲಿಂಗಸುಗೂರು ತಾಲ್ಲೂಕಿನಲ್ಲಿ ಕಳೆದ 2011, 2012, 2013 ಸಾಲಿನಲ್ಲಿ ಮತ್ತು ಜನವರಿ 2014 ರ ವರೆಗೆ ಒಟ್ಟು 97 ಕಳುವು ಪ್ರಕರಣಗಳು ಮತ್ತು 1 ದರೋಡೆ ಪ್ರಕರಣ ವರದಿಯಾಗಿರುತ್ತದೆ. ಇದನ್ನು ತುಲನೆ ಮಾಡಲಾಗಿ ಪ್ರಕರಣಗಳ ವರದಿ ಇಳಿಮುಖವಾಗಿರುತ್ತದೆ.

ಆ) ಲಿಂಗಸುಗೂರು ತಾಲ್ಲೂಕಿನಲ್ಲಿ ಕಳವು ಮತ್ತು ದರೋಡೆ ಪ್ರಕರಣಗಳು ದಾಖಲಾದ ವಿವರ ಈ ಕೆಳಕಂಡಂತಿವೆ.

ವರ್ಷ	ಕಳುವು ಪ್ರಕರಣಗಳ ಸಂಖ್ಯೆ	ದರೋಡೆ ಪ್ರಕರಣಗಳ ಸಂಖ್ಯೆ
2011	42	–
2012	29	–
2013	26	01
2014	00	–
ಒಟ್ಟು	97	01

ಈ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮಾಲುಗಳು ಮತ್ತು ಹಣದ ಮೊತ್ತವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ರೀತಿ ದಾಖಲಾಗಿರುವ ಕಳವು ಪ್ರಕರಣಗಳಲ್ಲಿ

1) 35 ಪ್ರಕರಣಗಳು ಪತ್ತೆಯಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿ ಸಲ್ಲಿಸಿದ್ದು, ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ.
2) 2 ಪ್ರಕರಣಗಳನ್ನು ಸರಹದ್ದಿನ ಮೇಲೆ ವರ್ಗಾವಣೆ ನೀಡಲಾಗಿರುತ್ತದೆ.
3) 2 ಪ್ರಕರಣಗಳು ಸುಳ್ಳು ಪ್ರಕರಣಗಳೆಂದು 'ಬಿ' ಅಂತಿಮ ವರದಿ ಸಲ್ಲಿಸಲಾಗಿದೆ.
4) 9 ಪ್ರಕರಣಗಳು ತನಿಖೆಯಲ್ಲಿರುತ್ತವೆ.
5) 49 ಪ್ರಕರಣಗಳು ನಾಪತ್ತೆ ಪ್ರಕರಣಗಳಾಗಿರುತ್ತವೆ.

2013 ನೇ ಸಾಲಿನಲ್ಲಿ ವರದಿಯಾಗಿರುವ 1 ದರೋಡೆ ಪ್ರಕರಣವು ಇನ್ನು ತನಿಖೆಯಲ್ಲಿರುತ್ತದೆ.

ಕೈಗೊಂಡಿರುವ ಕ್ರಮಗಳು

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಗುಡ್‌ಮಾರ್ನಿಂಗ್ ಬೀಟ್‌ವ್ಯವಸ್ಥೆ ಮಾಡಿದ್ದು ಮಫ್ತಿಯಲ್ಲಿ ಹಗಲು ಗಸ್ತು ಕರ್ತವ್ಯಕ್ಕೆ ನೇಮಿಸಿ, ಬೀಗ ಹಾಕಿದ ಮನೆಗಳ ಮಾಹಿತಿಯನ್ನು ಪಡೆದು ರಾತ್ರಿಗಸ್ತು ಕರ್ತವ್ಯಕ್ಕೆ ಹೋಗುವ ಸಿಬ್ಬಂದಿಯವರಿಗೆ ನೀಡಿ, ಅಂಥಹ ಮನೆಗಳಿಗೆ ಹೆಚ್ಚಿನ ನಿಗಾವಹಿಸಿ ಸ್ವತ್ತಿನ ಅಪರಾಧಗಳು ನಡೆಯದಂತೆ ಸೂಕ್ತ ಮುಂಜಾಗ್ರತೆ ವಹಿಸಲಾಗುತ್ತಿದೆ. ಸ್ವತ್ತಿನ ಅಪರಾಧಗಳು ಜರುಗಿದಾಗ ಸಿಡಿಆರ್, ಎಫ್‌ಪಿಬಿ ಘಟಕ ಹಾಗೂ ಶ್ವಾನದಳ ಸಹಾಯದಿಂದ ವಿಶೇಷ ತನಿಖಾ ತಂಡದಿಂದ ಸ್ವತ್ತಿನ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತಿದೆ.

ಅನುಬಂಧ

2011					
ಕ್ರ.ಸಂ	ಪೊಲೀಸ್ ಠಾಣೆ	ವಿದೇಶಿಯರು	ದಾಖಲಾದ ಪ್ರಕರಣಗಳ ಸಂಖ್ಯೆ	ಪತ್ತೆಹಚ್ಚಲಾದ ಪ್ರಕರಣಗಳ ಸಂಖ್ಯೆ	ವಶಪಡಿಸಿಕೊಂಡ ಮಾಲುಗಳು ಮತ್ತು ಹಣದ ಮೊತ್ತ
1	ಲಿಂಗಸುಗೂರು	ದರೋಡೆ	–	–	–
2	ಹಟ್ಟಿ	ದರೋಡೆ	–	–	–
3	ಮಸ್ಕಿ	ದರೋಡೆ	–	–	–
4	ಮುದಗಲ್	ದರೋಡೆ	–	–	–
	ಒಟ್ಟು		–	–	–
1	ಲಿಂಗಸುಗೂರು	ಕಳ್ಳತನ ಪ್ರಕರಣ	22	8	1] ಮೋಟರ್ ಸೈಕಲ್‌ಗಳು 89,000/- 2] ಗಂಧದ ಕಟ್ಟಿಗೆ 48,565/- 3] ಮೊಬೈಲ್ ಫೋನುಗಳು 27,570/- 4] ಹತ್ತಿ & ಒಂದು ಸೈಕಲ್ 2500/- 5] ನಗದು ಹಣ 3,34,065/- 6] ಬಂಗಾರ & ಬೆಳ್ಳಿಯ ಸಾಮಾನುಗಳು 1,76,000/-
2	ಹಟ್ಟಿ	ಕಳ್ಳತನ ಪ್ರಕರಣ	6	5	1] ನಗದು ಹಣ 12,000/- 2] ಬಂಗಾರದ & ಬೆಳ್ಳಿಯ ಸಾಮಾನುಗಳು 77,500/-

					3] ಪಂಪ್‌ಸೆಟ್ 6000/- 4] ಮೋಟರ್ ಸೈಕಲ್ 5000/- 5] ಮೊಬೈಲ್‌ಗಳು 1500/- 6] ಎಲ್.ಸಿ.ಡಿ. 13,000/-
3	ಮಸ್ಕಿ	ಕಳ್ಳತನ ಪ್ರಕರಣ	8	2	1) ನಗದು ಹಣ 1200/- ರೂ 2) 3 ಮೊಬೈಲ್ ಅ.ಕಿ.ರೂ. 3550/-
4	ಮುದಗಲ್	ಕಳ್ಳತನ ಪ್ರಕರಣ	6	4	1. ಒಂದು ಮಹೀಂದ್ರಾ ಟ್ರಾಕ್ಟರ್ ಅ.ಕಿ.ರೂ. 450000/- 2. ಒಂದು ಮೋ.ಸೈ. ಅ.ಕಿ.ರೂ.25000/- 3. ಒಂದು ಮೋ.ಸೈ. ಅ.ಕಿ.ರೂ.25000/- 4. ಬಂಗಾರದ 2 ಟಿಕೆಮಣಿ ಸ ಅ.ಕಿ.ರೂ.16000/-. ನಗದು ಹಣ ₹ 2000/- & ಕಳ್ಳತನಕ್ಕೆ ಬಳಸಿದ ಒಂದು ಕ್ರಷರ್ ವಾಹನ.
ಒಟ್ಟು	ಒಟ್ಟು		42	19	

2012					
ಕ್ರ.ಸಂ	ಪೊಲೀಸ್ ಠಾಣೆ	ನಿರೋನಾಮೆ	ದಾಖಲಾದ ಪ್ರಕರಣಗಳ ಸಂಖ್ಯೆ	ಪತ್ತೆಹಚ್ಚಲಾದ ಪ್ರಕರಣಗಳ ಸಂಖ್ಯೆ	ವಶಪಡಿಸಿಕೊಂಡ ಮಾಲುಗಳು ಮತ್ತು ಹಣದ ಮೊತ್ತ
1	ಲಿಂಗಸುಗೂರು	ದರೋಡೆ	–	–	–
2	ಹಟ್ಟಿ	ದರೋಡೆ	–	–	–
3	ಮಸ್ಕಿ	ದರೋಡೆ	–	–	–
4	ಮುದಗಲ್	ದರೋಡೆ	–	–	–
	ಒಟ್ಟು	ದರೋಡೆ	–	–	–
1	ಲಿಂಗಸುಗೂರು	ಕಳ್ಳತನ ಪ್ರಕರಣಗಳು	14	5	1) 3 ತೊಲೆ ಬಂಗಾರದ ಸಮಾನುಗಳು ಅ.ಕಿ.–75,000/– 2) ಟ್ರಾಕ್ಟರ್ ಮತ್ತು ಟ್ರೇಲರ್ ಅ.ಕಿ.–23000/– 3) ನಗದು ಹಣ–5,30000/– 4) ಒಂದು ಮೋ/ಸೈ ಅ.ಕಿ–30000/– 5) 15 ಕುರಿಗಳು ಅ.ಕಿ–30000/–
2	ಹಟ್ಟಿ	ಕಳ್ಳತನ ಪ್ರಕರಣಗಳು	4	1	ಕಂಪ್ಯೂಟರ್ ಸಾಮಾನುಗಳು ಅ.ಕಿ–21000/–
3	ಮಸ್ಕಿ	ಕಳ್ಳತನ ಪ್ರಕರಣಗಳು	5	–	---
4	ಮುದಗಲ್	ಕಳ್ಳತನ ಪ್ರಕರಣಗಳು	6	2	1. ಒಂದು ಟೇಪ್ ರೆಕಾರ್ಡರ್ ಅ.ಕಿ.ರೂ.500/– 2. ಎಲೆಕ್ಟ್ರಿಕ್ ವೈರ 6 ಬಂಡಲ್ ಅ.ಕಿ.ರೂ.4150/–
	ಒಟ್ಟು		29	8	

2013					
ಕ್ರ.ಸಂ	ಪೊಲೀಸ್ ಠಾಣೆ	ತಿರುನಾಮ	ದಾಖಲಾದ ಪ್ರಕರಣಗಳ ಸಂಖ್ಯೆ	ಪತ್ತೆಹಚ್ಚಲಾದ ಪ್ರಕರಣಗಳ ಸಂಖ್ಯೆ	ವಶಪಡಿಸಿಕೊಂಡ ಮಾಲುಗಳು ಮತ್ತು ಹಣದ ಮೊತ್ತ
1	ಲಿಂಗಸಗೂರು	ದರೋಡೆ	1	–	–
2	ಹಟ್ಟಿ	ದರೋಡೆ	–	–	–
3	ಮಸ್ಕಿ	ದರೋಡೆ	–	–	–
4	ಮುದಗಲ್	ದರೋಡೆ	–	–	–
	ಒಟ್ಟು	ದರೋಡೆ	1	–	ತನಿಪಯಲ್ಲಿರುತ್ತದೆ.
1	ಲಿಂಗಸಗೂರು	ಕಳ್ಳತನ ಪ್ರಕರಣಗಳು	13	2	1) ಒಂದು ಟಾಟಾ ಸುಮೋ ಗಾಡಿ ಅ.ಕಿ.ರೂ:2,48000/- 2) ಬಂಗಾರದ ಆಭರಣ ಅ.ಕಿ.ರೂ:48000/-
2	ಹಟ್ಟಿ	ಕಳ್ಳತನ ಪ್ರಕರಣಗಳು	8	4	1) ಬಂಗಾರದ ಆಭರಣ ಕರೂ:15000/- 2) ಕಬ್ಬಿಣದ ಸಲಕರಣೆಗಳು ಅಕಿರೂ:3000/- 3) ಬೆಳ್ಳಿ ಲಿಂಗದಕಾಯಿ ಅ.ಕಿ.ರೂ: 1800/- ಮತ್ತು ನಗದುಹಣ:2500/-
3	ಮಸ್ಕಿ	ಕಳ್ಳತನ ಪ್ರಕರಣಗಳು	4	1	1 ಟ್ರ್ಯಾಕ್ಟರ್ ಟ್ರ್ಯಾಲಿ ಅ.ಕಿ.ರೂ 1,50,000/-
4	ಮುದಗಲ್	ಕಳ್ಳತನ ಪ್ರಕರಣಗಳು	1	1	1.20 ಚೀಲ ಸೂರ್ಯಪಾನ ಅ.ಕಿ.ರೂ.20000/-
	ಒಟ್ಟು		26	8	